೧೨.೩೦ ಪಿ.ಎಂ.

ಅಧ್ಯಕ್ಷರು.— ಶ್ರೀ ಎಂ. ವಿ. ವೆಂಕಟಪ್ಪನವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಬಹುದು.

SRI D.B. CHENDREGOWDA.— I am on a Point of Order, before calling the next Calling Attention The matter revised under calling attention notice is before the Court. I feel it would amount to subjudice and cannot be discussed under the provisions of the rules. ಮಾನ್ಯ ಎಂ. ವಿ. ವೆಂಕಟಪ್ಪನವರು ಎತ್ತಿರತಕ್ಕ ಗಮನ ಸೆಳೆಯುವ ಸೂಚನೆ ಕೋಲಾರ ಜಿಲ್ಲಾ ಪರಿಷತ್ತಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಿಗೆ ಸಂಬಂಧಿಸಿದೆ ಆದರೆ ಈ ವಿಷಯ ನ್ಯಾಯಾಲಯದಲ್ಲಿರುವುದರಿಂದ ಇದಂ ಸಬ್‌ಜುಡಿಸ್ ಆಗುತ್ತದೆ.

MR. SPEAKER.— It all depends upon what are the issues that have been framed before the Court.

SRI D.B. CHANDREGOWDA.— The same subject is pending before the High Court. I would request the Hon. Speaker to get the matter examined before we take up the matter.

ಶ್ರೀ ಬಿ. ಬಸವಲಿಂಗಪ್ಪ.— ಅವರು ಎತ್ತಿರತಕ್ಕ ವಿಷಯ ನಿಜವಾಗಿ ಹೈಕೋರ್ಟ್‌ನಲ್ಲಿದೆ. ಆದರೆ ಹೈಕೋರ್ಟ್‌ನವರು ಏನು ನಿರ್ಣಯವನ್ನು ಮಾಡುತ್ತಾರೆ ಎಂಬ ಬಗ್ಗೆ ನಾವು ಮಾತನಾಡುವುದಿಲ್ಲ ಆದರೆ ಇದರಲ್ಲಿ ಏನು ವಿಷಯಗಳಿವೆ ಅವುಗಳ ಬಗ್ಗೆ ಮಾತನಾಡುವುದರಲ್ಲಿ ಏನು ಅಭ್ಯಂತರ ವಿಲ್ಲವೆಂದು ನನಗನಿಸುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ.— ಮೊದಲು ವಿಚಾರ ಏನು ಎಂಬುದನ್ನು ನಾನು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.— ನೀವು ಹೇಳುವುದಕ್ಕೆ ಮುಂಚಿತವಾಗಿಯೇ ನಾನು ಈ ವಿಷಯವನ್ನು ಎತ್ತಿದ್ದೇನೆ.

ಗಮನ ಸೆಳೆಯುವ ಸೂಚನೆ

೨) ಕೋಲಾರ ಜಿಲ್ಲಾ ಪರಿಷತ್ತಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ

ಶ್ರೀ ಎಂ.ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾ ಪರಿಷತ್ತಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಕನ್ನಡದ ಹೇಳಿಕೆಯ ಪ್ರತಿ ನಮಗೆ ಬಂದಿಲ್ಲ. ಆದ್ದರಿಂದ.....

ಶ್ರೀ ಬಿ. ಬಸವಲಿಂಗಪ್ಪ.—ಇಂಗ್ಲೀಷ್‌ನಲ್ಲಿರುವುದನ್ನು ಕನ್ನಡಕ್ಕೆ ತರ್ಜುಮೆ ಮಾಡಿಲ್ಲ. ಆದ್ದರಿಂದ ಇಂಗ್ಲೀಷ್‌ನಲ್ಲಿರುವುದನ್ನೇ ಓದುತ್ತೇನೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ಸ್ವಾಮಿ, ಕನ್ನಡದಲ್ಲಿ, ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡಿ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ''ನನ್ನ ಸರ್ಕಾರವು ಆಡಳಿತ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ನೀಡುತ್ತದೆ'' ಆದ್ದರಿಂದ ಕನ್ನಡದಲ್ಲೇ ಉತ್ತರವನ್ನು ಕೊಡಿ. ಏಕೆಂದರೆ ಇಂಗ್ಲೀಷ್ ಅರ್ಥವಾಗದೇ ಇರತಕ್ಕ ಸದಸ್ಯರು ಬಹಳ ಮಂದಿ ಇಲ್ಲಿದ್ದಾರೆ.

(ಗೊಂದಲ)

(ಮಾನ್ಯ ಸಚಿವರಿಗೆ ಹೇಳಿಕೆ ನೀಡಲು ಸದಸ್ಯರು ಅವಕಾಶ ಕೊಡಲಿಲ್ಲ.)

ಶ್ರೀ ಡಿ. ಬಿ. ಚಂದ್ರೇಗೌಡ.—ಮೂಲಭೂತವಾಗಿ ವಿಧಿಬಿಂದು ಬಗ್ಗೆ ಮಾನ್ಯ ಮಂತ್ರಿಗಳು ಇದೇ ವಿಚಾರ ಹೈಕೋರ್ಟಿನಲ್ಲಿದೆ ಎಂದು ಹೇಳಿದ್ದಾರೆ. ಇಲ್ಲಿ ಒಂದು ಏನೆಂದರೆ, the matter does not become sub-judice if a writ petition is pending before the court. In my opinion, on the same subject, there is a petition admitted ಅದನ್ನು ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಹಾಗಿದ್ದರೆ ಚರ್ಚೆಗೆ ಒಪ್ಪಿಕೊಳ್ಳಲಿ, ಸಬ್‌ಜುಡೀಸ್ ಆಗಂ ವುದಿಲ್ಲವೆಂದಂ ಹೇಳಲಿ. ರಿಟ್ ಪಿಟೀಷನ್ ಕಾಪಿ ತರಿಸಲಿ.

ಅಧ್ಯಕ್ಷರು.—ಸಬ್‌ಜುಡೀಸ್ ಆಗುತ್ತದೆಯೇ ಇಲ್ಲವೋ, ಅದು ತಮ್ಮ ಅಭಿಪ್ರಾಯ.

ಶ್ರೀ ಎಂ. ವಿ. ವೆಂಕಟಪ್ಪ.—ವಿಷಯ ಹೈಕೋರ್ಟಿನಲ್ಲಿರುವುದು ನಿಜ. ಅದು ನಮಗೂ ಗೊತ್ತಿದೆ ಜಿಲ್ಲಾ ಪರಿಷತ್ತಿನ ಸದಸ್ಯರು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದಾರೆ. ೨೮-೨-೮೯ರ ಮೀಟಿಂಗ್‌ನಲ್ಲಿ ೩೩ ಜನ ಸದಸ್ಯರು ಈ ರೀತಿ ಇಷ್ಟು ಹಣವನ್ನು ದುರುಪಯೋಗಪಡಿಸಿದ್ದಾರೆಂದು ವಿಷಯವನ್ನು ತಂದ ಬಳಿಕ ೭-೮ ಮೀಟಿಂಗ್‌ಗಳನ್ನು ನಡೆಸಿದ್ದಾರೆ. ಮೀಟಿಂಗ್‌ನಲ್ಲಿ ಏನು ಮಾಡುತ್ತಾರೆಂದರೆ, ೫ ನಿಮಿಷದಲ್ಲಿ ಪುಸ್ತಕ ಗಳನ್ನು ಕಾರ್ಯದರ್ಶಿಯವರು ಹೊರಗಡೆ ಎತ್ತಿಕೊಂಡು ಹೋಗಿ ರುಜು ಮಾಡಿಸಿಕೊಂಡು ಬರುತ್ತಾರೆ ಇದರ ಬಗ್ಗೆ ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ...

ಅಧ್ಯಕ್ಷರು.—ಇದರ ಬಗ್ಗೆ ಸಂಸದೀಯ ವ್ಯವಹಾರ ಸಚಿವರು ಏನು ಹೇಳುತ್ತಾರೆ ಹೇಳಲಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಹೈಕೋರ್ಟಿನಲ್ಲಿರುವುದು ಗೊತ್ತಿದೆ. ಹೈ ಕೋರ್ಟಿನವರು ಎರಡು ವರ್ಷ ತೆಗೆದುಕೊಳ್ಳಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಣ ದುರುಪಯೋಗದ ಬಗ್ಗೆ ಏನಾದರೂ ರಿಟ್ ಪಿಟಿಷನ್ ಇದ್ದು ಅದು ಹೈಕೋರ್ಟಿನಲ್ಲಿ ತೀರ್ಮಾನಕ್ಕೆ ಇದ್ದರೆ ಅದು ಸಬ್‌ಜುಡೀಸ್ ಆಗುತ್ತದೆ. ಆದರೆ ಇದು ಆ ವಿಷಯ ಅಲ್ಲ ಅಲ್ಲಿರತಕ್ಕ ವಿವಾದದ ವಸ್ತು ಏನೆಂದರೆ ಅದು ಮೀಟಿಂಗ್ ರೆಸಲ್ಯೂಷನ್, ಮತ್ತು ಮೀಟಿಂಗ್ ನಡೆಯಬೇತ್ತಿಲ್ಲವೆಂದು. ಇದು ವಿವಾದದ ವಸ್ತುವಾಗಿದೆಯೇ ಹೊರತು ಬೇರೆ ಅಲ್ಲ. ತಮಗೆ ಗೊತ್ತಿರುವ ಹಾಗೆ ಹಣ ದುರುಪಯೋಗವಾಗಿದೆಯೇ ಅಥವಾ ಇಲ್ಲವೇ ಎಂದು ಬಹುಶಃ ಅಲ್ಲಿ ರಿಟ್ ಫೈಲು ಮಾಡತಕ್ಕ ಪ್ರಶ್ನೆ ಇರುವುದಿಲ್ಲ. ಅದನ್ನು ನಿರ್ಣಯ ಮಾಡತಕ್ಕದು ಪ್ರತ್ಯೇಕವಾಗಿರುತ್ತದೆ. ಆದ್ದರಿಂದ ಅದು ಅದಕ್ಕೆ ಸಂಬಂಧಪಟ್ಟದ್ದು ಅಲ್ಲವೇ ಅಲ್ಲ.

ಶ್ರೀ ಸಿ. ಬೈರೇಗೌಡ.—ವಿಚಾರ ನನಗೆ ಗೊತ್ತಿರುವುದರಿಂದ ಅದನ್ನು ಹೇಳಿದರೆ ತಮಗೆ ಸಹಾಯ ವಾಗುತ್ತದೆ. ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಇರತಕ್ಕದ್ದು ಬೇರೆ ವಿಚಾರದಲ್ಲಿ. ಅದು ಸಭೆ ನಡೆದಂತಹ ದಿವಸ ಅಲ್ಲಿ ನಡೆದಂತಹ ವ್ಯವಹಾರಗಳ ಬಗ್ಗೆ ಇರತಕ್ಕದ್ದು, ಅಧ್ಯಕ್ಷರಿಗೆ ಬಹುಮತ ಇಲ್ಲದೆ ಇದ್ದರೂ ಬಹುಮಂತದಿಂದ ಪಾಸ್ ಆಯಿತು ಎಂದು ಅಧ್ಯಕ್ಷರು ನಮೂದಿಸಿಕೊಂಡಿದ್ದಾರೆ. ಆ ವಿಚಾರ ಹೈಕೋರ್ಟಿನಲ್ಲಿರುವುದು. ಇಲ್ಲಿ ಬಂದಿರುವುದು ಹಣದ ದುರುಪಯೋಗದ ಬಗ್ಗೆ. ಆದ್ದ ರಿಂದ ಎರಡೂ ವಿಚಾರಗಳು ಬೇರೆ ಬೇರೆ ಆಗಿರುವುದರಿಂದ ಹಣದ ದುರುಪಯೋಗದ ಬಗ್ಗೆ ಇಲ್ಲಿ ಗಮನ ಸೆಳೆಯುವ ಸೂಚನೆಯನ್ನು ತರಲಾಗಿದೆ. ಹೈಕೋರ್ಟಿನಲ್ಲಿರುವುದು ಮೀಟಿಂಗ್‌ನಲ್ಲಿ ಪ್ರೊಸೀಜರ್ ಅಡಾಪ್ಟ್ ಮಾಡಿರುವ ಬಗ್ಗೆ. ಆದ್ದರಿಂದ ಈಗ ಸಭೆಯ ಮುಂದಿರುವ ಗಮನ ಸೆಳೆಯುವ ಸೂಚನೆ ಯನ್ನು ತೆಗೆದುಕೊಳ್ಳಬಹುದೆಂದು ನನ್ನ ಅಭಿಪ್ರಾಯ....

ಅಧ್ಯಕ್ಷರು.—ಸರ್ಕಾರದ ಮುಂದಿರತಕ್ಕ ವಿಷಯದ ಬಗ್ಗೆ ರಿಟ್ ಪಿಟಿಷನ್ ಇದೆಯೇ? ಇದ್ದರೆ ಅದನ್ನು ನನಗೆ ಕಳುಹಿಸಿಕೊಟ್ಟರೆ ನಾನು ನೋಡಿ ಸಬ್‌ಜುಡೀಸ್ ಆಗುತ್ತದೋ ಇಲ್ಲವೋ ಎಂಬುದರ ಬಗ್ಗೆ ತೀರ್ಮಾನ ಕೊಡುತ್ತೇನೆ. ಈಗ ಇನೇ ಗಮನ ಸೆಳೆಯುವ ಸೂಚನೆ ಶ್ರೀ ಶಿವಾನಂದ ಕೌಜಲಗಿಯವರದ್ದು.

೩. ಬೆಳಗಾಂ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ಕೋಟ್ಯಾಂತರ ರೂಪಾಯಿಗಳ ಹತ್ತಿ ಕೆಡುತ್ತಿರುವುದರಿಂದ ರೈತರಿಂದ ಹತ್ತಿಯನ್ನು ಯೋಗ್ಯ ಬೆಲೆಗೆ ಸರ್ಕಾರದವರು ಕೊಂಡುಕೊಳ್ಳುವ ಬಗ್ಗೆ

ಶ್ರೀ ಶಿವಾನಂದ ಎಚ್. ಕೌಲಜಗಿ. ** ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ಮತ್ತು ಸವದತ್ತಿ ಮಾರುಕಟೆ ಯಲ್ಲಿ ಹತ್ತಿ ಕೊಳ್ಳದಿರುವುದರಿಂದ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.